**ಸಾಕ್ಷಿಯನ್ನು ದಿಃ 07.04.2026 ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

ಮುಖ್ಯ ವಿಚಾರಣೆಃ ಅರ್ಜಿದಾರರ ಪರ  ವಕೀಲರಿಂದಃ

ಈ ದಿನ ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ನಮೂದಿಸಿರುವ ಎಲ್ಲಾ ವಿಷಯಗಳು ಸರಿಯಾಗಿ ಮತ್ತು ಸತ್ಯವಾಗಿರುತ್ತವೆ. ಅದಕ್ಕೆ ನನ್ನ ಸಹಿ ಇರುತ್ತದೆ.

ಅರ್ಜಿದಾರರಿಗೆ ಸಂಬಂಧಿಸಿದ ಕೇಸ್ ಶೀಟನ್ನು ಹಾಜರುಪಡಿಸಿದ್ದು ಅದನ್ನು ನಿಪಿ. 12 ಎಂದು,

ಒಟ್ಟು 10 ಎಕ್ಸ್ ರೇ ಫಿಲಂಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ.13 ಎಂದು ಗುರುತಿಸಲಾಯಿತು.

**ಪಾಟೀ ಸವಾಲು – 3 ನೇ ಎದುರುದಾರರ ಪರ  ವಕೀಲರಿಂದ**

ಅರ್ಜಿದಾರರ ಉದ್ಯೋಗದ ಬಗ್ಗೆ ನನಗೆ ಮಾಹಿತಿ ಇಲ್ಲ. ದಿಃ 25.07.2022 ರ ನಂತರ ಅರ್ಜಿದಾರರನ್ನು ಆಗಾಗ್ಗೆ ಪರೀಕ್ಷಿಸಿದ ಬಗ್ಗೆ ನಮ್ಮಲ್ಲಿ ದಾಖಲೆ ಇಲ್ಲ . ಗಾಯಾಳು ಬಳಿ ಇದೆ ಎನ್ನುತ್ತಾರೆ. ಬಿಡುಗಡೆಯಾಗುವಾಗ ಗಾಯಾಳುವಿನ ಆರೋಗ್ಯ ಸ್ಥಿತಿ ಸ್ಥಿರವಾಗಿತ್ತು. ಬೆಡ್ ರೆಸ್ಟ್ ತೆಗೆದುಕೊಳ್ಳಲು ಹೇಳಿದ್ದೇವು ಎನ್ನುತ್ತಾರೆ. ದಿಃ 20.02.2026 ರಂದು ಅರ್ಜಿದಾರರನ್ನು ಪರೀಕ್ಷಿಸಿದ ಬಗ್ಗೆ ನಾನು ಈ ದಿನ ದಾಖಲೆ ಹಾಜರು ಪಡಿಸಿಲ್ಲ. ಇಂದಿನ ಪ್ರಮಾಣ ಪತ್ರವನ್ನು ನಾನು ಆ ದಿನದ ಪರೀಕ್ಷೆಯ ಆಧಾರದ ಮೇಲೆ ತಯಾರಿಸಿರುತ್ತೇನೆ. ನನ್ನ ಪ್ರಮಾಣ ಪತ್ರದಲ್ಲಿ ನಾನು ದಿಃ 20.02.2026 ರಂದು ಅರ್ಜಿದಾರರನ್ನು ಪರೀಕ್ಷಿಸಿ ನಮೂದಿಸಿಕೊಂಡ ನಮೂದನೆಗಳ ಆಧಾರದ ಮೇಲೆ ಪ್ರಮಾಣ ಪತ್ರವನ್ನು ತಯಾರಿಸಿದ್ದೇನೆಂದು ಹೇಳಿಲ್ಲ ಎಂದರೆ ಸರಿ. ಆ ದಿನದ ಕ್ಲಿನಿಕಲ್ ಎಕ್ಸಾಮಿನೇಷನ್ ಬಗ್ಗೆ ಪ್ರಮಾಣ ಪತ್ರದಲ್ಲಿ ನಮೂದಿಸದೇ ಇದ್ದ ಕಾರಣವೇ ನಾನು ಆಕ್ಚುಯಲ್ ರೇಂಜ್ ಆಫ್ ಮೂಮೆಂಟ್ ಅನ್ನು ಹೇಳಿಲ್ಲ ಎಂದರೆ ಸರಿಯಲ್ಲ. ಎಷ್ಟು ನಷ್ಟ ಆಗಿದೆ ಎಂದು ಮಾತ್ರ ನಾನು ಪ್ರಮಾಣ ಪತ್ರದಲ್ಲಿ ನಮೂದಿಸಿದ್ದೇನೆ ಎಂದರೆ ಸರಿ. ಆಕ್ಚುಯಲ್ ರೇಂಜ್ ಆಫ್ ಮೂಮೆಂಟ್ ಎಷ್ಟಿತ್ತು ಎಂದು ನಮೂದಿಸಲು ತೊಂದರೆ ಇರಲಿಲ್ಲ. ನಾನು ಡಿಸೆಬಿಲಿಟಿ

ಅಸೆಸ್ಮೆಂಟ್ ಶೀಟ್ ಅನ್ನು ಪ್ರತ್ಯೇಕವಾಗಿ ಹಾಜರು ಪಡಿಸಿಲ್ಲ. ನಾನು ಪ್ರಮಾಣ ಪತ್ರದಲ್ಲಿ ಊಹೆಯ ಮೇರೆಗೆ ಶೇಕಡವಾರು ನ್ಯೂನತೆಗಳನ್ನು ಲೆಕ್ಕಾಚಾರ ಮಾಡಿದ್ದೇನೆ ಎಂದರೆ ಸರಿಯಲ್ಲ.

2. ಪ್ರಮಾಣ ಪತ್ರದಲ್ಲಿ ಪೂರ್ವ ನಿರ್ದರಿತವಾದ ನ್ಯೂನತೆಗೆ ಅನುಗುಣವಾಗಿ ಅಂಕಿ ಅಂಶಗಳನ್ನು ನಮೂದಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳುವಂತ ಪ್ರಮಾಣದಲ್ಲಿ ಅರ್ಜಿದಾರರಿಗೆ ನ್ಯೂನತೆ ಇಲ್ಲ ಎಂದರೆ ಸರಿಯಲ್ಲ. ಅಪಘಾತವಾಗಿ ಮೂರುವರೆ ವರ್ಷ ಆಗಿರುವ ಕಾರಣ ಮಾಡರೇಟ್ ನೋವಿಗೆ ಶೇಕಡ 3 ರಷ್ಟು ನೀಡಿರುವುದು ಆಧಾರ ರಹಿತವಾದುದು ಎಂದರೆ ಸರಿಯಲ್ಲ. ಅವರು ನೋವಿನಿಂದ ಬಳಲುವ ಬಗ್ಗೆ ಯಾವುದೇ ದಾಖಲಾತಿ ಹಾಜರು ಪಡಿಸಿಲ್ಲ ಎಂದರೆ ಸರಿ. ಶಾಲೆಗೆ ಆಯಾ ಕೆಲಸ ಮಾಡಲು ನಾನು ನಮೂದಿಸಿರುವ ನ್ಯೂನತೆ ಅಡ್ಡ ಬರುವುದಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಹೆಚ್ಚಿನ ಪರಿಹಾರ ಸಿಗಲಿ ಎಂದು ನಾನು ಹೆಚ್ಚಿನ ಪ್ರಮಾಣದಲ್ಲಿ ನ್ಯೂನತೆ ನಿರ್ಧರಿಸಿದ್ದೇನೆ ಎಂದರೆ ಸರಿಯಲ್ಲ. ನಾನು ದಿಃ 20.02.2026 ರಂದು ಅರ್ಜಿದಾರರನ್ನು ಪರೀಕ್ಷೆಗೆ ಒಳಪಡಿಸಿಲ್ಲ ಎಂದರೆ ಸರಿಯಲ್ಲ. ಮೂಳೆಗಳು ಕೂಡಿಕೊಂಡಿದೆ. ಎಕ್ಸರೇಗಳ ವರದಿಗಳನ್ನು ನಾನು ಹಾಜರು ಪಡಿಸಿಲ್ಲ. ಅರ್ಜಿದಾರರಿಗೆ ಯಾವುದೇ ತೊಂದರೆ ಇಲ್ಲದೆ ಇದ್ದರೂ ಸಹ ತೊಂದರೆ ಇದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

1 ಮತ್ತು 2 ನೇ ಎದುರುದಾರರು ಹಾಗೂ ಅವರ ಪರ ವಕೀಲರನ್ನು ಕೂಗಿ ಕರೆಯಿಸಲಾಗಿ ಗೈರು ಹಾಜರಿದ್ದು, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ ಇಲ್ಲ.

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/–

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ., ಮೈಸೂರು.